

# ಚಂದ್ರ ಆಭರಣ

ಹೆಸರಿಗೆ ತಕ್ಕ ಹಾಗೆ ಚಂದ್ರನ ಆಕಾರದ ಒಡವೆಗಳು ಇಂದು ಫ್ಯಾಷನ್‌ಪ್ರಿಯರ ಮನತಣಿಸುತ್ತಿವೆ. ಅಪ್ಪಟ ಚಂದ್ರನ ಹೊಳಪನ್ನೇ ಹೊಂದಿರುವ ಈ ಆಭರಣ ಪದಕ, ಓಲೆ, ವೈವಿಧ್ಯಗಳಲ್ಲಿ ಲಭ್ಯವಿದೆ. ಸೀರೆ, ಲೆಹಂಗಾ, ಲಂಗ ದಾವಣಿ... ಹೀಗೆ ಯಾವುದೇ ತರಹದ ಉಡುಪಿಗೂ ಮ್ಯಾಚ್ ಆಗಿ ಸಖತ್ ಲುಕ್ ಕೊಡುತ್ತದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ
ಚಿತ್ರಕೃಪೆ: ಮುಳಿಯ ಕೇಶವ ಭಟ್ ಅಂಡ್ ಸನ್ಸ್

‘ಹಕ್ಕಿ ಹಾರುತ್ತಾವಾ, ಹಾಡಿ ಕುಣಿಯುತ್ತಾವಾ’ ಇದು ಭಾವಗೀತೆಯ ಒಂದು ಸಾಲು. ಆಗಸದೆತ್ತರಕೆ ಹಾರುವ ಹಕ್ಕಿಯನ್ನು ನೋಡಲು ಚಂದ, ಕಾಮನಬಿಲ್ಲು ಬಂದಾಗ ಗರಿ ಬಿಚ್ಚಿ ಕುಣಿಯುವ ನವಿಲು ಅಂದ. ಹೀಗೆ ಪ್ರಕೃತಿ ಅತ್ಯಂತ ಸುಂದರ ವರ್ಣಮಯ. ತಂಗಾಳಿ ಬೀಸುವ ಆಗಸ ಚಂದ್ರನಿದ್ದಾಗ ಅತೀ ತಂಪಾದ ವಾತಾವರಣವಿರುತ್ತದೆ. ಆಹ್ಲಾದಕರವಾದ ನೋಟವಿರುತ್ತದೆ.

ಬಟ್ಟೆ ಆಗಲಿ, ಯಾವುದೇ ಚಿತ್ರಣ ಆಗಲಿ, ಮನೆ ಆಗಲಿ, ಸೌಂದರ್ಯ ಆಗಲಿ ನೋಡುವಾಗ ‘ನೋಟ’ ಚೆನ್ನಾಗಿರಬೇಕು. ಅದು ಆಭರಣಕ್ಕೂ ಅನ್ವಯಿಸುತ್ತದೆ. ಹಿಂದೆ ಆಭರಣ (ಚಿನ್ನದ್ದು) ಗಟ್ಟಿಯಾಗಿದ್ದರೆ ಸಾಕು. ಬಾಳತನ ಬಂದರೆ ಸಾಕಪ್ಪ ಅನ್ನೋ ಕಾಲವಿತ್ತು. ಇಂದು ಹಾಗಲ್ಲ. ಹಿರಿಯರು ಗಟ್ಟಿಯಾದ ಆಭರಣ ಬೇಕು ಅಂದರೂ ಗಟ್ಟಿ ಜೊತೆಗೆ ಸೊಗಸಾಗಿದ್ದರೆ ಮಾತ್ರ ಆಭರಣ ತೊಡುವ ಕನ್ಯೆಯರನ್ನು ಕಾಣಬಹುದು. ಅಲ್ಲದೆ ಮಹಿಳೆಯರೂ ಅಷ್ಟೇ ಕುಸುರಿ ಕೆಲಸ ಅತೀ ನಾಜೂಕಾಗಿ, ಸುಂದರವಾಗಿ ಇದ್ದರೆ ಮಾತ್ರ ಸಂತಸದಿಂದ ತೊಟ್ಟುಕೊಳ್ಳುತ್ತಾರೆ. ಅಂತಹ ಸುಂದರ ಆಭರಣಗದಲ್ಲಿ ಒಂದು ಒಡವೆ ಎಂದರೆ ಅದು ‘ಚಂದ್ರ ಆಭರಣ’.

‘ಚಂದ್ರ ಪದಕ’ ಹೆಸರಿನಲ್ಲೇ ಇರುವಂತೆ ಇದು ಚಂದ್ರನಂತೆ ಹೊಳೆಯುತ್ತದೆ. ಚಂದ್ರನಂತೆ ಆಕಾರವಿದೆ. ಚಂದ್ರನಂತೆ ಅತೀ ಸುಂದರವಾಗಿ ಕಾಣಿಸುತ್ತದೆ.